# ಪರಿಚಯ

ಹೊಸ ಒಡಂಬಡಿಕೆಯ ಬರಹಗಾರರು ಸಭೆಗಳನ್ನು ಸ್ಥಾಪಿಸಿದಾಗ, ಅವರು ಅವುಗಳನ್ನು ಕೈ ಬಿಟ್ಟು ಬಿಡಲಿಲ್ಲ. ಥೆಸಲೋನಿಕದಲ್ಲಿ ಸಭೆಯನ್ನು ಸ್ಥಾಪಿಸಿದ ಪೌಲ ಮತ್ತು ಆತನ ಜೊತೆಗೆಲಸದವರು, ಹಿಂಸೆಯ ಕಾರಣದಿಂದಾಗಿ ಎಳೆಯ ಸಭೆಯನ್ನು ತೊರೆದು ಹೋಗಬೇಕಾಗಿ ಒತ್ತಾಯಿಸಲ್ಪಟ್ಟರು (ಅಪೊಸ್ತಲರ ಕೃತ್ಯಗಳು 17:1-10). ಅವರು ಹೊರಟು ಹೋದ ಕೆಲವೇ ತಿಂಗಳುಗಳಲ್ಲಿ, ಆ ಎಳೆಯ ಸಭೆಯನ್ನು ಉದ್ದೇಶಿಸಿ ಸದಸ್ಯರನ್ನು ಪರಿಪಕ್ವತೆಗೆ ತರುವದಕ್ಕಾಗಿ ಪ್ರೋತ್ಸಾಹಿಸಲು ಎರಡು ಪತ್ರಿಕೆಗಳು ಬರೆಯಲ್ಪಟ್ಟವು. ಎರಡನೆಯ ಪತ್ರಿಕೆಯು ನಾವು ಕರೆಯುವ 2 ಥೆಸಲೋನಿಕದವರಿಗೆ ಬರೆದ ಪತ್ರಿಕೆ.

## ಲೇಖಕ

### ಆಂತರಿಕ ಪುರಾವೆ

ಪತ್ರಿಕೆಯು ಬರೆಯುವವರು "ಪೌಲ ಸಿಲ್ವಾನ ತಿಮೊಥೆಯರು" ಎಂಬುದನ್ನು ದೃಢಪಡಿಸುವದರೊಂದಿಗೆ ಆರಂಭಗೊಳ್ಳುತ್ತದೆ. 3:17ರಲ್ಲಿ ಈ ಕೆಳಗಿನ ಮಾತುಗಳ ಮೂಲಕ ಪೌಲನ ಕರ್ತೃತ್ವವು ಪುನಃ ದೃಢೀಕರಿಸಲ್ಪಡುತ್ತದೆ: "ಪೌಲನೆಂಬ ನಾನು ನನ್ನ ಸ್ವಂತ ಕೈಯಿಂದ ವಂದನೆಯನ್ನು ಬರೆದಿದ್ದೇನೆ." ಅಷ್ಟುಮಾತ್ರವಲ್ಲದೆ, ಪತ್ರಿಕೆಯ ಶೈಲಿ ಮತ್ತು ಭಾಷೆಯ ಬಳಕೆಯು ಪೌಲನ ಬೇರೆ ಪತ್ರಿಕೆಗಳೊಂದಿಗೆ ಹೋಲುತ್ತವೆ.

1 ಮತ್ತು 2 ಥೆಸಲೋನಿಕದವರಿಗೆ ಬರೆದ ಪತ್ರಿಕೆಗಳೆರಡೂ ತಮ್ಮ ಆರಂಭಿಕ ವಚನಗಳಲ್ಲಿ ಪೌಲ, ಸಿಲ್ವಾನ, ಮತ್ತು ತಿಮೊಥೆಯರ ಹೆಸರುಗಳನ್ನು ಪ್ರಸ್ತಾಪಿಸುತ್ತವೆ. ಎರಡೂ ಪತ್ರಿಕೆಗಳು ಉತ್ತಮ ಪುರುಷ ಬಹುವಚನ ಸರ್ವನಾಮವನ್ನು, "ನಾವು" ಎಂಬುದನ್ನು ಕಡೆಯ ತನಕವು ಬಳಸುತ್ತವೆ. ಈ ಪುರಾವೆಗಳು ಸೀಲನು (ಸಿಲ್ವಾನ ಎಂಬುದರ ಸಂಕ್ಷಿಪ್ತರೂಪವಾಗಿದೆ) ಥೆಸಲೋನಿಕದಲ್ಲಿ ಸಭೆಯನ್ನು ಸ್ಥಾಪಿಸುವದರಲ್ಲಿ ಪೌಲನಿಗೆ ಸಹಾಯ ಮಾಡಿದನೆಂಬ ಅಪೊಸ್ತಲರ ಕೃತ್ಯಗಳು ಪುಸ್ತಕದ ಐತಿಹಾಸಿಕ ದಾಖಲೆಗೆ ಹೊಂದಾಣಿಕೆಯಾಗುತ್ತವೆ (ನೋಡಿರಿ ಅಪೊಸ್ತಲರ ಕೃತ್ಯಗಳು 17:4).

### ಬಾಹ್ಯ ಪುರಾವೆ

2 ಥೆಸಲೋನಿಕದವರಿಗೆ ಪತ್ರಿಕೆಯನ್ನು ಬರೆದವನು ಪೌಲನೇ ಎಂಬುದು ಸ್ವತಃ ಪತ್ರಿಕೆಯ ಹೊರಗಿನ ಪ್ರೇರಿತವಲ್ಲದ ಮೂಲಗಳಿಂದ ಬೆಂಬಲಿಸಲ್ಪಟ್ಟಿರುತ್ತದೆ. ಈ ಪತ್ರಿಕೆಗಿರುವ ಬಾಹ್ಯ ಪುರಾವೆಯು 1 ಥೆಸಲೋನಿಕದವರಿಗೆ ಬರೆದ ಪತ್ರಿಕೆಗಿಂತಲೂ ಹೆಚ್ಚು

ಪ್ರಬಲವಾಗಿರುತ್ತದೆ.

ಹಲವಾರು ಪ್ರಾಚೀನ ಸಾಕ್ಷಿಗಳು 2 ಥೆಸಲೋನಿಕದವರಿಗೆ ಬರೆದ ಪತ್ರಿಕೆಯ ಲೇಖಕನು ಪೌಲನೆಂಬದನ್ನು ಪ್ರಮಾಣೀಕರಿಸುತ್ತವೆ. ಆಸ್ಯ ಸೀಮೆಯ Polycarpನು (ಕ್ರಿ.ಶ. 135) ಆ ಪ್ರತಿಕೆಯಿಂದ ಉಲ್ಲೇಖನ ಮಾಡುತ್ತಾನೆ ಮತ್ತು ಅದೇ ವೇಳೆಯಲ್ಲಿ ಪೌಲನ ಹೆಸರನ್ನು ಪ್ರಸ್ತಾಪಿಸುತ್ತಾನೆ. Marcionನ ಕ್ಯಾನೋನ (ಪ್ರೇರಿತ ಪುಸ್ತಕಗಳ ಒಂದು ಪಟ್ಟಿ: ಕ್ರಿ.ಶ. 140) ಅದನ್ನು ಸೇರ್ಪಡೆಗೊಳಿಸಿರುತ್ತದೆ. Muratorian ಅವಶೇಷದಲ್ಲಿ (ಕ್ರಿ.ಶ. 170) ಸಹ 2 ಥೆಸಲೋನಿಕದವರಿಗೆ ಬರೆದ ಪತ್ರಿಕೆಯು ಸೇರಿತ್ತು. Ireneausನು (ಕ್ರಿ.ಶ. 180) ಇದನ್ನು ಹೆಸರು ಹೇಳಿ ಪ್ರಸ್ತಾಪಿಸಿದನು ಮತ್ತು ಅದನ್ನು ಪೌಲನು ಬರೆದನೆಂದು ತಿಳಿಸುತ್ತಾನೆ. ಅಲೆಗ್ಜಾಂಡ್ರಿಯಾದ Clementನು (ಕ್ರಿ.ಶ. 190) 2 ಥೆಸಲೋನಿಕ 3:1, 2 ವಚನಗಳನ್ನು ಉಲ್ಲೇಖ ಮಾಡುತ್ತಾನೆ.[1]

ಮೇಲಿನ ಪುರಾವೆಗಳ ಹೊರತಾಗಿಯೂ, ಪೌಲನ ಕರ್ತೃತ್ವದ ಕುರಿತು ಆಕ್ಷೇಪಣೆಗಳನ್ನು ಎಬ್ಬಿಸಲಾಗಿರುತ್ತದೆ. ಅವುಗಳನ್ನು ಮೂರು ಆಕ್ಷೇಪಣೆಗಳನ್ನು Robert L. Thomasನು ಪಟ್ಟಿ ಮಾಡುತ್ತಾನೆ.[2]

1. *ಇದರಲ್ಲಿ ಅಂತ್ಯಕಾಲಾವಸ್ಥೆಯ ಬೋಧನೆಯು 1 ಥೆಸಲೋನಿಕದವರಿಗೆ ಬರೆದ ಪತ್ರಿಕೆಗಿಂತಲೂ ವ್ಯತ್ಯಾಸವಾಗಿರುತ್ತದೆ.* 2 ಥೆಸಲೋನಿಕದವರಿಗೆ ಬರೆದ ಪತ್ರಿಕೆಯಲ್ಲಿ *parousia*ಗಿಂತ (ಕ್ರಿಸ್ತನ ಎರಡನೆಯ ಬರೋಣ) ಮುಂಚೆ ಅದರ ಅನೇಕ ಮೂನ್ಸೂಚನೆಯ ಘಟನೆಗಳು ಇರುತ್ತವೆ, ಅದೇ ವೇಳೆಯಲ್ಲಿ 1 ಥೆಸಲೋನಿಕದವರಿಗೆ ಬರೆದ ಪತ್ರಿಕೆಯಲ್ಲಿ ಅದು ಇನ್ನೇನು ಸಂಭವಿಸುವ ಅಂಚಿನಲ್ಲಿರುವಂತೆ ತೋರುತ್ತದೆ. ಹೇಗೂ, ನಾವು ಮುಂದೆ ಕಲಿಯಲಿರುವ ಪ್ರಕಾರ, ಒಬ್ಬನು 2 ಥೆಸಲೋನಿಕದವರಿಗೆ ಬರೆದ ಪತ್ರಿಕೆಯನ್ನು ವ್ಯಾಖ್ಯಾನ ಮಾಡಿದಾಗ, ಆ ರೀತಿಯಲ್ಲಿ ತೋರುವ ಭಿನ್ನತೆಗಳು ಮಾಯೆಯಾಗುವವು. ಥೆಸಲೋನಿಕದಲ್ಲಿದ್ದಂಥ ಬೇರೆ ಬೇರೆಯಾದ ಸ್ಥಿತಿಗಳಿಗೆ ವ್ಯತ್ಯಾಸವಾದ ಒತ್ತು ಕೊಡುವ ಅಗತ್ಯವಿರುತ್ತದೆ, ಆದರೆ 2 ಥೆಸಲೋನಿಕ ಪತ್ರಿಕೆಯಲ್ಲಿ ಅದಕ್ಕೆ ವಿರುದ್ಧವಾದದ್ದೆಂದು ತೋರುವ ಹಾಗೆ 1 ಥೆಸಲೋನಿಕ ಪತ್ರಿಕೆಯಲ್ಲಿ *parousia*ದ ಕುರಿತು ಯಾವದೇ ವಿವರವಾದ ಚಿತ್ರಣವು ಇರುವದಿಲ್ಲ.

2. *ಕಡೇ ನ್ಯಾಯತೀರ್ಪಿನ ಕುರಿತಾಗಿರುವ ಅದರ ಅಭಿಪ್ರಾಯಗಳು ಪೌಲನ ಇತರ ಬರಹಗಳಲ್ಲಿರುವ ಆತನ ಅಭಿಪ್ರಾಯಕ್ಕಿಂತ ವ್ಯತ್ಯಾಸವಾಗಿರುತ್ತವೆ.* ಈ ರೀತಿ ಇರುವದು ಕಷ್ಟಕರವೆಂದು ಸಮರ್ಥಿಸುವವರು ಅಧ್ಯಾಯ 1 ರಲ್ಲಿ ಗತಿಗಳ ಹಿಮ್ಮೋಗವಾಗುವದಾಗಿದ್ದು ಅದರಲ್ಲಿ ಹಿಂಸಕರಿಗೆ ದಂಡನೆ ಮತ್ತು ಹಿಂಸಿಸಲ್ಪಟ್ಟವರಿಗೆ ಶಮನ ದೊರಕುತ್ತದೆಂಬುದನ್ನು ಗಮನಕ್ಕೆ ತರುತ್ತಾರೆ (1:5-10). ಈ ರೀತಿಯ ಉಪದೇಶವು ಅನಂತರದ ಪೀಳಿಗೆಗಳಿಗೆ ಸೇರಿದ್ದೆಂದು ಸಂದೇಹವಾದಿಗಳು ಹೇಳುತ್ತಾರೆ. ಆ ವಿಧವಾದ ತರ್ಕಗಳು ಪೌಲನು (ಪವಿತ್ರಾತ್ಮನ ಮಾರ್ಗದರ್ಶನದಲ್ಲಿ) ತನ್ನ ಮುಂಚಿನ ಅಂತ್ಯಕಾಲಾವಸ್ಥೆಯ ಕುರಿತು ಬೇರೆ ಆಯಾಮಗಳನ್ನು ಸೇರ್ಪಡೆಗೊಳಿಸುವದಕ್ಕೆ ಸಾಧ್ಯವಿಲ್ಲವೆಂಬುದಾಗಿ ಊಹಿಸಿಕೊಳ್ಳು ವಂಥವುಗಳಾಗಿವೆ. ಸೇರ್ಪಡೆಗೊಳಿಸಲ್ಪಟ್ಟಿರುವ ಈ “ಬೇರೆ ಆಯಾಮಗಳು” ಎಂದು ಹೇಳಲ್ಪಡುವಂಥವುಗಳು ಪೌಲನು ಈಗಾಗಲೇ ಪ್ರಕಟಗೊಳಿಸಿರುವ ಸಂಗತಿಗಳಿಗೆ

ತದ್ವಿರುದ್ಧವಾಗಿರುವದಿಲ್ಲ; ಅವುಗಳು ಕೇವಲ ಅವುಗಳಿಗೆ ಇನ್ನಷ್ಟು ಸೇರಿಸುತ್ತವೆ ಮತ್ತು ಒಂದು ಸಂಪೂರ್ಣ ಚಿತ್ರಣವನ್ನು ಪಡೆಯುವದಕ್ಕೆ ಸಹಾಯ ಮಾಡುತ್ತವೆ.

ಥೆಸಲೋನಿಕದವರು ಇನ್ನಷ್ಟು ಹೆಚ್ಚಾದ ಹಿಂಸೆಯನ್ನು ಅನುಭವಿಸುವವರಾದಾಗ (ಅದು 2 ಥೆಸಲೋನಿಕದವರಿಗೆ ಬರೆದ ಪತ್ರಿಕೆಯಲ್ಲಿ ಸ್ಪಷ್ಟವಾಗಿ ಕಂಡು ಬರುತ್ತದೆ.), ಅವರಿಗೆ ಒಂದು ದಿನ "ಉಪಶಮನ" ದೊರಕುತ್ತದೆಂಬ ಭರವಸೆಯ ಅಗತ್ಯತೆಯಯು ಅವರಿಗೆ ಅತ್ಯಂಥ ಹೆಚ್ಚಾಗಿತ್ತು. ಇದೊಂದು ಪ್ರಥಮ-ಶತಮಾನದ-ಮಧ್ಯಭಾಗದ ಪತ್ರಿಕೆಯೆಂಬುದಕ್ಕೆ ಪುರಾವೆಗಳಿರುತ್ತವೆ, ಮತ್ತು ಇದರಲ್ಲಿ ಹಿಂಸಕರಿಗೆ ದಂಡನೆ ಮತ್ತು ಹಿಂಸಿಸಲ್ಪಟ್ಟಿರುವವರಿಗೆ ಉಪಶಮನ ಉಂಟಾಗುತ್ತದೆಂದು ಹೇಳುವ ವಿಭಾಗವು ಇರುತ್ತದೆ. ಅಂಥ ಉಪದೇಶವನ್ನು ಅನಂತರದಲ್ಲಿ ಬರುವ ಸಂತತಿಗೋಸ್ಕರ ಮಾತ್ರವೇ ಮಿತಿಗೊಳಿಸುವದಕ್ಕೆ ಯಾವ ಕಾರಣವೂ ಇರುವದಿಲ್ಲ.

ಇದೇ ರೀತಿಯ ಸಿದ್ಧಾಂತವು ಶಾಸ್ತ್ರಗಳೊಳಗೆ ಬೇರೆ ಕಡೆಗಳಲ್ಲಿ ಕಂಡು ಬರುತ್ತವೆ. ಅದು ಈ ಪತ್ರಿಕೆಯು ಬರೆಯಲ್ಪಡುವದಕ್ಕೆ ಹಲವಾರು ದಶಕಗಳ ಮುಂಚೆಯೇ ಯೇಸುವಿನ ತುಟಿಗಳಲ್ಲಿ ಕಂಡು ಬರುತ್ತದೆ (ಲೂಕ 16:25; ಮತ್ತಾಯ 25:31-46). ಯೆಶಾಯನು ಇದನ್ನು ಯೇಸುವಿಗಿಂತ ನೂರಾರು ವರ್ಷಗಳ ಮುಂಚೆ ಉಪದೇಶಿಸಿದನು (ಯೆಶಾಯ 66:15-24). ಪೌಲನು ಸಹ ಅದೇ ಕಾರ್ಯವನ್ನು ರೋಮಾ 2:5-10ರಲ್ಲಿ ಕಲಿಸಿದನು. ಆದ್ದರಿಂದ ಈ ವಾದವು ನಿರಾಧಾರವಾದದ್ದು.

3. *ಇದು ಕ್ರಿಸ್ತನ ಕುರಿತು ಹೊಂದಿರುವ ದೃಷ್ಟಿಕೋನದಲ್ಲಿ ಆತನಿಗೆ ಅನ್ವಯಿಸಿರುವ ಲಕ್ಷಣಗಳು ಮತ್ತು ಕ್ರಿಯೆಗಳು ಪೌಲನ ಕಾಲದ ನಂತರದಲ್ಲಿ ಅಭಿವೃದ್ಧಿಗೊಳಿಸಲಾದ ದೃಷ್ಟಿಕೋನವಾಗಿದೆ.* ಅಂಥ ಆಕ್ಷೇಪಣೆಗಳು 2 ಥೆಸಲೋನಿಕ 2:16ರ ಮೇಲೆ ಆಧಾರವಾಗಿರುತ್ತವೆ, ಅದು "ನಮ್ಮನ್ನು ಪ್ರೀತಿಸಿ ನಮಗೆ ನಿತ್ಯವಾದ ಆದರಣೆಯನ್ನೂ . . . ಅನುಗ್ರಹಿಸಿ . . . ನಮ್ಮ ಕರ್ತನಾದ ಯೇಸು ಕ್ರಿಸ್ತನೂ ನಮ್ಮ ತಂದೆಯಾದ ದೇವರೂ ನಿಮ್ಮ ಹೃದಯಗಳನ್ನು ಸಂತೈಸಿ" ಎಂದು ಹೇಳುತ್ತದೆ. ಇಂಥ ಆಕ್ಷೇಪಣೆಗಳಿಂದ ಎಬ್ಬಿಸಲ್ಪಟ್ಟ ಸಮಸ್ಯೆಯು ಏನೆಂದರೆ ಕ್ರಿಸ್ತನು ಇಲ್ಲಿ ದೈವಿಕನು ಮಾತ್ರವೇ ಅಲ್ಲ, ಆದರೆ ಆತನು ಇಲ್ಲಿ ತಂದೆಗಿಂತಲೂ ಮೊದಲು ಪ್ರಸ್ತಾಪಿಸಲ್ಪಟ್ಟಿದ್ದಾನೆ, ಅದೇ ರೀತಿಯಯಾಗಿರುವ ಅವರಿಬ್ಬರ ಸಂಬಂಧದಲ್ಲಿ ನೋಡುವದಾದರೆ 1 ಥೆಸಲೋನಿಕ 3:11ರಕ್ಕೆ ಅದು ವಿರುದ್ಧವಾಗಿರುತ್ತದೆ, ಅಲ್ಲಿ ತಂದೆಯು ಮೊದಲು ಹೆಸರಿಸಲ್ಪಟ್ಟಿದ್ದಾನೆ. "ಯೇಸುವನ್ನು ಈ ರೀತಿಯಲ್ಲಿ ಮಹಿಮಾಕರಣಗೊಳಿಸುವದು ಪೌಲನ ಕಾಲದ ನಂತರದಲ್ಲಿ ಬಂದದ್ದಾಗಿದೆ" ಎಂದು ಆಕ್ಷೇಪಣೆಯು ಹೇಳುತ್ತದೆ. ಹೇಗೂ, 1 ಥೆಸಲೋನಿಕದವರಿಗೆ ಬರೆದ ಪತ್ರಿಕೆಯು ಸಹ ಯೇಸುವನ್ನು ದೈವಿಕನೆಂದು ಮುಂದಿಡುತ್ತದೆ (1:1; 2:14; 3:11, 12; 5:28). ಇಬ್ಬರನ್ನು ದೈವಿಕವೆಂದು ಅಂಗೀಕರಿಸಿಕೊಂಡು ಬಿಟ್ಟರೆ, ಯಾವ ಹೆಸರು ಮೊದಲು ಬಂದರೂ ಅಷ್ಟೇನೂ ವ್ಯತ್ಯಾಸವೇನ್ನಿಸುವದಿಲ್ಲ. ಪೌಲನು ಅವರ ಹೃದಯಗಳು ಸಂತೈಸಲ್ಪಟ್ಟು ಬಲಗೊಳಿಸಲ್ಪಡಲಿ ಎಂದು ಪ್ರಾರ್ಥಿರುವಂತಹ 2:16, 17ರ ಸನ್ನಿವೇಶದಲ್ಲಿ, ಯೇಸುವನ್ನು ಮೊದಲು ಪ್ರಸ್ತಾಪಿಸುವದರಲ್ಲಿ ಅರ್ಥವಿರುತ್ತದೆ, ಯಾಕೆಂದರೆ ಆತನು "ದೇವರಿಗೂ ಮನುಷ್ಯರಿಗೂ ಮಧ್ಯಸ್ಥನಾಗಿದ್ದಾನೆ" (1 ತಿಮೊಥೆ 2:5). ಆದುದರಿಂದ, Thomasನು ಹೇಳಿದ

ಪ್ರಕಾರ, "ಆಂತರಿಕ ಪರಿಗಣನೆಗಳ ಮೇಲೆ ಆಧಾರಗೊಂಡಿರುವ ಇವುಗಳಲ್ಲಿ ಯಾವ ವಾದಗಳು ಸಹ ಸ್ವತಃ ಪತ್ರಿಕೆಯು ಹೇಳಿಕೊಳ್ಳುವವುಗಳನ್ನು ಮತ್ತು ಪೌಲನ ಕರ್ತೃತ್ವದ ಕುರಿತ ಬಲವಾದ ಸಂಪ್ರದಾಯಿಕ ಪ್ರಮಾಣೀಕರಣಗಳನ್ನು ತಳ್ಳಿ ಹಾಕುವದಕ್ಕೆ ಸಾಕಾದವುಗಳಾಗಿರುವದಿಲ್ಲ."[3]

## ಬರೆಯುವ ಸಂದರ್ಭ ದಿನಾಂಕ, ಮತ್ತು ಸ್ಥಳ

1 ಥೆಸಲೋನಿಕದವರಿಗೆ ಬರೆದ ಪತ್ರಿಕೆಯಲ್ಲಿ ಗಮನಿಸಿದ ಹಾಗೆ, ಪೌಲನು ಥೆಸಲೋನಿಕದಲ್ಲಿ ಕ್ರಿ.ಶ. 50 ಕೊನೆಯ ಭಾಗದಲ್ಲಿ ಅಥವಾ 51ರ ಆರಂಭಿಕ ಭಾಗದಲ್ಲಿ ಸಭೆಯನ್ನು ಸ್ಥಾಪಿಸಿದನು. ಆತನು ಕ್ರಿ.ಶ. 51ರ ಕಡೆಯ ಭಾಗದ ವೇಳೆ 1 ಥೆಸಲೋನಿಕದವರಿಗೆ ಪತ್ರಿಕೆಯನ್ನು ಕೊರಿಂಥದಲ್ಲಿದ್ದುಕೊಂಡು ಬರೆದನು. ಬಹುಶಃ ಆತನು ಕೊರಿಂಥದಲ್ಲಿ ಸುಮಾರು ಎರಡು ವರ್ಷಗಳ ಕಾಲ ಉಳಿದನು (ಅಪೊಸ್ತಲರ ಕೃತ್ಯಗಳು 18:11), ಮತ್ತು ಆತನು ಅಲ್ಲಿದ್ದ ವೇಳೆಯಲ್ಲಿ, ತಿಮೊಥೆಯ ಹಾಗೂ ಸೀಲರು ಆತನೊಂದಿಗಿದ್ದರು. ಆ ಬಳಿಕ, ತಿಮೊಥೆಯನು ಪೌಲನ ಸಂಗಡ ಎಫೆಸಕ್ಕೆ ಹೋದನು, ಆದರೆ ಸೀಲನು ಕೊರಿಂಥ ಮತ್ತು ಎಫೆಸದ ನಡುವಿನ ಚಿತ್ರಣದಲ್ಲಿ ಕಾಣಿಸಿಕೊಳ್ಳುವದಿಲ್ಲ. ಈ ಮೂವರು ಪುನಃ ಎಂದಾದರೂ ಒಟ್ಟಿಗೆ ಇದ್ದದ್ದರ ಕುರಿತಾಗಿ ನಮಗೆ ಯಾವದೇ ಲಿಖಿತ ದಾಖಲೆಯು ಇರುವದಿಲ್ಲ. 2 ಥೆಸಲೋನಿಕದವರಿಗೆ ಪತ್ರಿಕೆಯು ಬರೆಯಲ್ಪಡುವ ವೇಳೆ, ಅವರು ಒಟ್ಟಿಗೆ ಇದ್ದರು, ಮತ್ತು ಇದರಿಂದ ಇದು ಕೊರಿಂಥದಿಂದ ಬರೆಯಲ್ಪಟ್ಟಿತೆಂಬುದಕ್ಕೆ ಹೆಚ್ಚಿನ ಸಂಭಾವ್ಯತೆಯು ಉಂಟಾಗುತ್ತದೆ.

ತಿಮೊಥೆಯನು ಥೇಸಲೋನಿಕದಿಂದ ಹಿಂದಿರುಗಿ ಬಂದ ತಕ್ಷಣದಲ್ಲೇ 1 ಥೆಸಲೋನಿಕದವರಿಗೆ ಪತ್ರಿಕೆಯು ಕೊರಿಂಥದಿಂದ ಬರೆಯಲ್ಪಟ್ಟಿತ್ತು (1 ಥೆಸಲೋಣಿಕ 3:1-8). ಸ್ಪಷ್ಟವಾಗಿರುವ ಪ್ರಕಾರ, ಪೌಲನು ಮೊದಲನೆಯ ಪತ್ರಿಕೆಯನ್ನು ಬರೆದ ಸ್ವಲ್ಪ ಕಾಲದಲ್ಲೇ, ಪೌಲನು ಸಭೆಯಲ್ಲಿದ್ದ ಸಮಸ್ಯೆಗಳ ಕುರಿತು "ಕೇಳಲು" ಆರಂಭಿಸಿದನು (2 ಥೆಸಲೋನಿಕ 3:11), ಆದ್ದರಿಂದ ಆತನು ಎರಡನೆಯ ಸಾರಿ ಬರೆಯುತ್ತಾನೆ. ಸಂಬೋಧಿಸಲಾಗಿರುವ ಸಮಸ್ಯೆಗಳು ಒಂದು ರೀತಿಯಲ್ಲಿ ವ್ಯತ್ಯಾಸವಾದವುಗಳು ಆದರೆ ಹಾಗಿದ್ದರೂ ಅವುಗಳು ಎರಡನೆಯ ಬರೋಣಕ್ಕೆ ಸಂಬಂಧಿಸಿರುತ್ತವೆ, ಅದು ಮುಂಚಿನ ಪತ್ರಿಕೆಯ ಬರೆದ ತಕ್ಷಣದಲ್ಲೇ ಈ ಪತ್ರಿಕೆಯು ಬರೆಯಲ್ಪಟ್ಟಿತೆಂಬ ನಿರ್ಣಯವನ್ನು ಬೆಂಬಲಿಸುತ್ತದೆ. ಆದುದರಿಂದ, ಈ ಎರಡನೆಯ ಪತ್ರಿಕೆಯು ಕ್ರಿ.ಶ. 52ರಲ್ಲಿ, ಮೊದಲನೆಯ ಪತ್ರಿಕೆಯು ಬರೆಯಲ್ಪಟ್ಟು ಆರಕ್ಕಿಂತಲೂ ಕಡಿಮೆ ಅಥವಾ ಆರು ತಿಂಗಳುಗಳ ಬಳಿಕ ಬರೆಯಲ್ಪಟ್ಟಿರುವ ಸಾಧ್ಯತೆಯಿರುತ್ತದೆಂದು ತೋರುತ್ತದೆ.

ಸಭೆಯಲ್ಲಿ ನಡೆಯುತ್ತಿರುವ ಸಮಸ್ಯೆಗಳ ಕುರಿತು ಪೌಲನು ಯಾವ ರೀತಿಯಲ್ಲಿ ಕೇಳಿಸಿಕೊಂಡನೋ ನಮಗೆ ತಿಳಿಯದು (3:11). ಬಹುಶಃ ಆತನು ಒಂದು ಪ್ರಮುಖ ವಾಣಿಜ್ಯ ಕೇಂದ್ರವಾದ ಕೊರಿಂಥ ಪಟ್ಟಣವನ್ನು ಹಾದು ಹೋಗುತ್ತಿದ್ದ ಒಬ್ಬ ಥೆಸಲೋನಿಕದ ಪ್ರಯಾಣಿಕನಿಂದ ಕೇಳಿಸಿಕೊಂಡಿರಬಹುದಾಗಿದೆ.

# ಉದ್ದೇಶಗಳು ಮತ್ತು ಚರ್ಚೆಯಾಂಶಗಳು

ಪೌಲನು ತನ್ನ ಪ್ರಾಮಾಣಿಕತೆಯ ಬಗ್ಗೆ ಮೊದಲನೆಯ ಪತ್ರಿಕೆಯಲ್ಲಿ ಸಮರ್ಥಿಸಿಕೊಳ್ಳುವದು ಅಂಗೀಕೃತವಾಗಿತ್ತು (1 ಥೆಸಲೋನಿಕ 2:1-4). ವಾಸ್ತವಾಂಶದಲ್ಲಿ, ಆತನು ಎರಡನೆಯ ಪತ್ರಿಕೆಯಲ್ಲಿ ಆ ರೀತಿಯಾದ ಯಾವದನ್ನೂ ಪುನರಾವರ್ತಿಸುವದಿಲ್ಲ. ಅಲ್ಲದೆ, ಆತನು ನಂಬಿಕೆಯಲ್ಲಿ ನೆಲೆಗೊಳ್ಳುವಂತೆ ಬುದ್ಧಿವಾದ ಹೇಳಿದ್ದ ಪ್ರಕಾರವಾಗಿಯೇ ಬಹಳಷ್ಟು ಮಂದಿ ನೆಲೆಯಾಗಿದ್ದರೆಂದು ತೋರುತ್ತದೆ (1 ಥೆಸಲೋನಿಕ 5:1-11).

ಕ್ರಿಸ್ತನ ಎರಡನೆಯ ಬರೋಣದ ವಿಷಯದಲ್ಲಿ ಥೆಸಲೋನಿಕದವರನ್ನು ತಿದ್ದುವರಲ್ಲಿ ಆತನು ಸ್ವಲ್ಪ ಮಟ್ಟಿಗೆ ಯಶಸ್ವಿಯಾಗಿದ್ದನು. ಆತನು ಕೆಲವು ವಿಷಯಗಳ ಕುರಿತು ಸ್ಪಷ್ಟತೆಯನ್ನು ನೀಡಿದನಾದರೂ, ಅವರು ಆತನ ಮೊದಲ ಪತ್ರಿಕೆಯ ಕೆಲವು ಕಾರ್ಯಗಳನ್ನು ಅಪಾರ್ಥಮಾಡಿಕೊಂಡರೆಂಬುದು ಸ್ಪಷ್ಟವಾಗುತ್ತದೆ. ಸುಳ್ಳು ಬೋಧಕರು ಸ್ವತಃ ಪೌಲನು ನೀಡಿದ್ದ ಹೇಳಿಕೆಗಳನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದರು. ಕೆಲವರು ಕರ್ತನ ದಿನವು ಈಗಾಗಲೇ ಬಂದು ಬಿಟ್ಟಿದೆ ಎಂಬದಾಗಿ ಬೋಧಿಸುತ್ತಿದ್ದರೆಂಬುದು ಸ್ಪಷ್ಟವಾಗಿ ಕಂಡು ಬರುತ್ತದೆ (2 ಥೆಸಲೋನಿಕ 2:1-3), ಮತ್ತು ಪೌಲನು ಇದೇ ವಿಷಯವಾಗಿಯೇ ಬರೆದಿದ್ದನೆಂದು ಅವರು ಹೇಳಿಕೊಳ್ಳುತ್ತಿದ್ದರು. ಆದುದರಿಂದ, ಪೌಲನು ತನ್ನ ಉಪದೇಶವನ್ನ ಮತ್ತೊಂದಾವರ್ತಿ ವಿವರಿಸುವದಕ್ಕೋಸ್ಕರ ಈ ಪತ್ರಿಕೆಯನ್ನು ಬರೆದನು. ಈ ಪತ್ರಿಕೆಯ ಉದ್ದೇಶಗಳಾವವೆಂದರೆ . . .

- ಎರಡನೆಯ ಬರೋಣದ ವಿವಿಧ ಅಂಶಗಳ ಬಗ್ಗೆ ಸ್ಪಷ್ಟನೆ ನೀಡುವದಕ್ಕೆ. ಪೌಲನ ಹೆಸರಿನಲ್ಲಿದ್ದ ನಕಲಿ ಪತ್ರಿಕೆಯೊಂದು ವಿವಾದಾಂಶವನ್ನು ಮತ್ತಷ್ಟು ಕ್ಲೀಷ್ಟಕರಗೊಳಿಸಿತ್ತು (ನೋಡಿರಿ 2:2).
- ಮರಳಿ ಕೆಲಸವನ್ನು ಮಾಡಬೇಕೆಂದು ತಾನು ಕೊಟ್ಟ ಅಪ್ಪಣೆಗಳನ್ನು ಅನುಸರಿಸದವರನ್ನು ಏನು ಮಾಡಬೇಕೆಂದು ಹೇಳುವದಕ್ಕಾಗಿ ಬರೆದನು. 1 ಥೆಸಲೋನಿಕದವರಿಗೆ ಪತ್ರಿಕೆಯನ್ನು ಬರೆದ ಬಳಿಕ ಪರಿಸ್ಥಿತಿಯು ಇನ್ನಷ್ಟು ಹದಗೆಟ್ಟಿತ್ತು.
- ಹಿಂಸೆಯು ಮತ್ತಷ್ಟು ಘೋರವಾಗಿ ಬಂದದ್ದರಿಂದ ನಂಬಿಗಸ್ತರನ್ನು ಇನ್ನಷ್ಟು ಧೈರ್ಯಪಡಿಸುವದಕ್ಕಾಗಿ ಬರೆದನು.

ಈ ಪತ್ರಿಕೆಯ ಪ್ರಮುಖ ಚರ್ಚೆಯಾಂಶಗಳು ಮೊದಲ ಪತ್ರಿಕೆಯಲ್ಲಿ ಪಟ್ಟಿ ಮಾಡಲಾಗಿರುವಂಥವುಗಳ ರೀತಿಯಲ್ಲಿಯೇ ಇರುತ್ತವೆ: ಮೂರು ವ್ಯಕ್ತಿಗಳಲ್ಲಿರುವ ಏಕೈಕ ಸತ್ಯ ದೇವರು (1:1, 2; 2:13, 14), ಕ್ರಿಸ್ತನ ದೇವತ್ವ (2:16, 17), ಶಾಸ್ತ್ರಗಳ ಪ್ರೇರಣೆ (3:6, 15), ಶಿಲುಬೆಯಲ್ಲಿ ಬೇರೂರಿರುವ ರಕ್ಷಣೆ (2:13, 14), ಕ್ರೈಸ್ತೀಯ ಕೆಲಸದ ನೀತಿಸೂತ್ರಗಳು (3:6-15), ಮತ್ತು ಪ್ರಾರ್ಥನೆಯ ಮೌಲ್ಯತೆ (1:11; 2:16, 17; 3:5, 16).

# ಸಂಕ್ಷಿಪ್ತ ವರ್ಣನೆ[4]

I. ಪ್ರೋತ್ಸಾಹಗೊಳಿಸುವಿಕೆ (ಅಧ್ಯಾಯ 1)
   A. ವಂದನೆಗಳು (1:1, 2)
   B. ಥೆಸಲೋನಿಕದವರ ದೃಡನಿಷ್ಠೆಗಾಗಿ ಕೃತಜ್ಞತಾಸ್ತುತಿ (1:3, 4)
   C. ದೇವರ ನೀತಿಯುಳ್ಳ ನ್ಯಾಯತೀರ್ಪು ಮತ್ತು ಕ್ರಿಸ್ತನ ಎರಡನೆಯ ಬರೋಣ (1:5-10)
   D. ವಿಜ್ಞಾಪನೆ (1:11, 12)

II. ಉಪದೇಶ (ಅಧ್ಯಾಯ 2)
   A. ಕ್ರಿಸ್ತನ ಎರಡನೆಯ ಬರೋಣ (2:1-12)
      1. ಆತನ ಎರಡನೆಯ ಬರೋಣವು ಇನ್ನೂ ಸಂಭವಿಸಿರುವದಿಲ್ಲ (2:1, 2)
      2. ಆತನ ಬರೋಣಕ್ಕೆ ಮುಂಚೆ ಸಂಭವಿಸಬೇಕಾದ ಘಟನೆಗಳು (2:3-12)
   B. ಸ್ತೋತ್ರಾರ್ಪಣೆ ಮತ್ತು ಬುದ್ಧಿವಾದ (2:13-15)
   C. ಥೆಸಲೋನಿಕದವರಿಗಾಗಿ ಪ್ರಾರ್ಥನೆ (2:16, 17)

III. ಬುದ್ಧಿವಾದ (ಅಧ್ಯಾಯ 3)
   A. ಪೌಲನಿಗಾಗಿ ಮತ್ತು ಆತನ ಜೊತೆಗೆಲಸದವರಿಗಾಗಿ ಪ್ರಾರ್ಥಿಸಬೇಕೆಂಬ ಒಂದು ಮನವಿ (3:1, 2)
   B. ಕರ್ತನಲ್ಲಿ ಮತ್ತು ಥೆಸಲೋನಿಕದವರಲ್ಲಿ ಭರವಸೆಯಿರುವದೆಂಬ ಒಂದು ಹೇಳಿಕೆ (3:3-5)
   C. ಅಕ್ರಮವಾಗಿ ನಡೆಯುವವ ಸದಸ್ಯರ ವಿಷಯದಲ್ಲಿ ನಡೆದುಕೊಳ್ಳಬೇಕಾದ ಆಜ್ಞೆಗಳು (3:6-15)
   D. ಮುಕ್ತಾಯ (3:16-18)

# ಅನ್ವಯಿಸುವಿಕೆ

## ಬೋಧಕರೇ, ಬೋಧಿಸುವದನ್ನು ಮುಂದುವರೆಸಿರಿ!

ದೇವರಿಂದ ಪ್ರೇರಿತವಾದ 1 ಥೆಸಲೋನಿಕದವರಿಗೆ ಪತ್ರಿಕೆಯನ್ನು ಬರೆದ ಮೇಲೆ ಥೆಸಲೋನಿಕದಲ್ಲಿನ ಕ್ರೈಸ್ತರ ಸಮಸ್ಯೆಗಳು ಮತ್ತು ಶೋಧನೆಗಳು ಇತ್ಯರ್ಥಗೊಳ್ಳುವವೆಂದು ಪೌಲನು ನಿರೀಕ್ಷಿಸಿದ್ದನು. ಆದರೆ ವಿಷಯವು ಹಾಗಿರಲಿಲ್ಲ. ತೋರುವ ಪ್ರಕಾರ, ಕೆಲವು ತಿಂಗಳುಗಳಾದ ಮೇಲೆ, ಮುಂಚೆ ಇದ್ದ ಅದೇ ಸಮಸ್ಯೆಗಳಲ್ಲಿ ಕೆಲವು ಈಗಲೂ ಇದ್ದವು, ಮತ್ತು ಹೊಸ ಸಮಸ್ಯೆಗಳು ಕಾಣಿಸಿಕೊಂಡಿದ್ದವು!

ಅವರ ಬೋಧಕರು ಏನು ಮಾಡಿದರು? ಅಂಥ ಪರಿಪಕ್ವತೆಯುಳ್ಳ ಸಹೋದರರಿಗೂ

ನಮಗೂ ಸಂಬಂಧವೇ ಇಲ್ಲ ಎಂದು "ಕೈ ತೊಳೆದುಕೊಂಡು ಬಿಟ್ಟರೋ"? ಈ ಸಹೋದರರಲ್ಲಿ ಕೆಲವರು ತಪ್ಪಿನಲ್ಲಿದ್ದು ಅಥವಾ ಕೆಲವರು ಕಠಿಣವಾದ ಹಿಂಸೆಯಲ್ಲಿ ಬಳಲಿ ಬೆಂಡಾಗಿ ಹೋಗಿದ್ದರಿಂದ ಅವರನ್ನು ಇವರು ತೀವ್ರವಾಗಿ ಖಂಡಿಸಿದರೋ? ಅವರು ಅವರಿಗೆ ಚಿಂತೆ ಮಾಡದೆ ಅವರ ಪರಿಪಕ್ವವಿಲ್ಲದ ಸ್ಥಿತಿಯಲ್ಲಿಯೇ ಇದ್ದು ಬಿಡಿರಿ ಎಂದು ಹೇಳಿದರೋ?

ಇಲ್ಲ! ಅವರು ಇವುಗಳಲ್ಲಿ ಯಾವದೊಂದನ್ನೂ ಮಾಡಲಿಲ್ಲ. ಈ ತೊಳಲಾಟದಲ್ಲಿದ್ದ ಸಹೋದದರಿಗೆ ಸಲಹಾಸೂಚನೆ, ವಿವರಣೆ, ಎಚ್ಚರಿಕೆ, ಮತ್ತು ಪ್ರೋತ್ಸಾಹಗಳನ್ನು ನೀಡುವದಕ್ಕಾಗಿ ಅವರಿಗೆ ಇನ್ನೊಂದು ಪತ್ರಿಕೆಯನ್ನು ಬರೆದು ಕಳುಹಿಸಿದರು. ಈ ಎಳೆಯ ಕ್ರೈಸ್ತರು ಕಲಿಯಬಲ್ಲವರಾಗಿದ್ದಾರೆಂದು ಅವರು ನಂಬಿದ್ದರು, ಮತ್ತು ಪೌಲ, ಸೀಲ, ಹಾಗೂ ತಿಮೊಥೆಯರು ಅವರಿಗೆ ಕಲಿಸುವದಕ್ಕೆ ಬಯಸಿದರು. ಈ ಪತ್ರಿಕೆಯು ಬೋಧಿಸುವದರಲ್ಲಿ, ಪ್ರೋತ್ಸಾಹಿಸುವದರಲ್ಲಿ, ಮತ್ತು ಬೇರೆಯವರು ನಿರಂತರವಾಗಿ ತಮ್ಮ ಜೀವಿತಗಳೊಳಗೆ ಕಷ್ಟಗಳನ್ನು ಅಥವಾ ಹೊಸ ಸಮಸ್ಯೆಗಳನ್ನು ಅನುಭವಿಸುತ್ತಿದ್ದಾಗ್ಯೂ, ಅವರೊಂದಿಗೆ ಸಂವಹನ ಮಾಡುವದರಲ್ಲಿ ನಾವು ದೃಢನಿಷ್ಠೆಯುಳ್ಳವರಾಗಿರಬೇಕು ಎಂಬುದಕ್ಕೆ ನಮಗೊಂದು ಪಾಠವಾಗಿರುತ್ತದೆ. ಕಷ್ಟಗಳನ್ನು ಎದುರಿಸುತ್ತಿರುವವರಿಗೆ ನಾವು ಹೇಗೆ ಸಹಾಯ ಒದಗಿಸಬೇಕು?

*ದೇವರ ವಾಕ್ಯವನ್ನು ವಿವರಿಸುವದರಲ್ಲಿ ತಾಳ್ಮೆಯಿಂದಿರಿ.* ನಾವು ಯಾವದೋ ಒಂದು ಪಾಠವನ್ನು ಕಲಿಸಿರುವದರಿಂದ ನಮ್ಮ ಸುತ್ತಲಿನವರೆಲ್ಲರೂ ಅದನ್ನು ಅರ್ಥಮಾಡಿಕೊಂಡಿರುತ್ತಾರೆ, ನಂಬಿರುತ್ತಾರೆ, ಜ್ಞಾಪಕದಲ್ಲಿಟ್ಟುಕೊಂಡಿರುತ್ತಾರೆ, ಮತ್ತು ಅದನ್ನು ಕೈಕೊಂಡು ನಡೆಯುತ್ತಾರೆ ಎಂಬದಾಗಿ ನಾವು ಭಾವಿಸುತ್ತೇವೆ. ಅದು ಹಾಗಿರುವದಿಲ್ಲ. ಬಹಳಷ್ಟು ಜನರಿಗೆ ನಿಜವಾದ ಹಾಗೂ ಶಾಶ್ವತವಾದ ಬದಲಾವಣೆಗಳನ್ನು ಮಾಡಿಕೊಳ್ಳುವದು ಕಷ್ಟಕರವಾಗಿರುತ್ತದೆ. ಸಾಮರ್ಥ್ಯ, ಮನಸ್ಸಿರುವಿಕೆ, ಜ್ಞಾನ, ತಿಳುವಳಿಕೆ, ಸಾಮಾಜಿಕ ಮತ್ತು ಕುಟುಂಬ ವಾತಾವರಣಗಳಲ್ಲಿರುವ ವ್ಯತ್ಯಾಸತೆಗಳು, ಮತ್ತು ಇತರ ಕಾರಣಾಂಶಗಳು ಸಹ ಅವರಲ್ಲಿ ಬದಲಾವಣೆಯಾಗುವದಕ್ಕೆ ಅಭ್ಯಂತರವಾಗುತ್ತವೆಂಬುದರಲ್ಲಿ ಸಂಶಯವಿಲ್ಲ. ಬೋಧನೆಯನ್ನು ಕೇಳಿಸಿಕೊಳ್ಳುವದು ಮತ್ತು ಅದನ್ನು ಕಾರ್ಯರೂಪಕ್ಕೆ ತರುವದರ ನಡುವಿನ ಪ್ರತಿಯೊಂದು ಹೆಜ್ಜೆಯಲ್ಲಿ, ವಿಧೇಯತೆಯ ಪ್ರಕ್ರಿಯೆಯು ಹಳಿ ತಪ್ಪಬಹುದಾಗಿದೆ.

ತತ್ಫಲಿತವಾಗಿ, ಜನರು ಬೋಧಿಸಲ್ಪಡುವ ವಿಷಯವನ್ನು ಪೂರ್ತಿಯಾಗಿ ಅರ್ಥಮಾಡಿಕೊಳ್ಳುವ ತನಕವೂ ಅವರಿಗೆ ಬೈಬಲ್ ಸತ್ಯಗಳನ್ನು ತಾಳ್ಮೆಯಿಂದ ವಿವರಿಸಬೇಕಾದ ಅಗತ್ಯವಿರುತ್ತದೆ. ಅವರ ಪ್ರಶ್ನೆಗಳಿಗೆ ಉತ್ತರಿಸತಕ್ಕದ್ದು ಮತ್ತು ವಿಷಯ ಕುರಿತು ಅವರಿಗಿರುವ ತಪ್ಪು ತಿಳುವಳಿಕೆಗಳನ್ನು ಸರಿಪಡಿಸತಕ್ಕದ್ದು. ಬಳಸಲ್ಪಟ್ಟ ಪದಗಳು, ಅವುಗಳನ್ನು ಹೇಳುವ ರೀತಿ, ಕೊಡಲ್ಪಟ್ಟಿರುವ ದೃಷ್ಟಾಂತಗಳು, ಮತ್ತು ಮುಂದಿಡಲ್ಪಟ್ಟಿರುವ ಉದಾಹರಣೆಗಳು ಒಬ್ಬ ವ್ಯಕ್ತಿಯು ದೇವರ ಚಿತ್ತದ ಕುರಿತು ಅರ್ಥಮಾಡಿಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸಬಲ್ಲವು ಅಥವಾ ಅಭ್ಯಂತರ ಪಡಿಸಬಲ್ಲವು.

ಇದು ಏಕೆ ಪ್ರಾಮುಖ್ಯವಾದದ್ದು? ಯಾಕೆಂದರೆ ಆತ್ಮದ ರಕ್ಷಣೆಯು ಪಣದಲ್ಲಿರುತ್ತದೆ! ತಿಮೊಥೆಯನಿಗೆ ಹೀಗೆ ಹೇಳಲಾಯಿತು, "ನಿನ್ನ ವಿಷಯದಲ್ಲಿಯೂ ನಿನ್ನ ಉಪದೇಶದ

ವಿಷಯದಲ್ಲಿಯೂ ಎಚ್ಚರಿಕೆಯಾಗಿರು. ನೀನು ಈ ಕಾರ್ಯಗಳಲ್ಲಿ ನಿರತನಾಗಿರು; ಹೀಗಿರುವದರಿಂದ ನಿನ್ನನ್ನೂ ನಿನ್ನ ಉಪದೇಶ ಕೇಳುವವರನ್ನು ರಕ್ಷಿಸುವಿ" (1 ತಿಮೊಥೆ 4:16). ಆತನು ಎಚ್ಚರಿಕೆಯಾಗಿಯೂ ಸಂಪೂರ್ಣನಾಗಿಯೂ ಇರಬೇಕಿತ್ತು, ಮತ್ತು ಜನರಿಗೆ ಅವರ ಆತ್ಮಗಳ ರಕ್ಷಣೆಯಲ್ಲಿ ಸಹಾಯ ಮಾಡುವದರಲ್ಲಿ ಸ್ಥಿರತೆಯುಳ್ಳವನಾಗಿರಬೇಕಿತ್ತು.

*ಸಲಹೆಯನ್ನು ಮತ್ತೊಂದು ಸಾರಿ ಹೇಳುವದಕ್ಕೆ ಮನಸ್ಸುಳ್ಳವರನಾಗಿರು.* ಜನರು ಒಂದು ಭಾವನೆಯನ್ನು ಪೂರ್ಣವಾಗಿ ಅರ್ಥಮಾಡಿಕೊಂಡು ಅದನ್ನು ನಂಬಿದಾಗ್ಯೂ, ಅವರು ಅದನ್ನು ನೆನಪಿನಲ್ಲಿಟ್ಟುಕೊಂಡು ಕಾರ್ಯರೂಪದಲ್ಲಿ ಕೈಕೊಂಡು ನಡೆಯುವರೆಂದು ಅದರರ್ಥವಾಗುವದಿಲ್ಲ. ಒಬ್ಬನು ಉಪದೇಶವನ್ನು ಅರ್ಥಮಾಡಿಕೊಂಡು ಅದಕ್ಕೆ ಸಹಮತವನ್ನು ಸೂಚಿಸಿದಾಗ್ಯೂ, ಆತನು ಅದನ್ನು ತನ್ನ ಪರಿಸ್ಥಿತಿಯೊಳಗೆ ಅನ್ವಯಿಸಿಕೊಳ್ಳಲು ಮರೆತು ಹೋಗಬಲ್ಲನು. ನಾವು ಹೇಳಬಹುದಾದನ್ನು ಮತ್ತೊಂದು ಸಾರಿ ತಿಳಿಸಬೇಕಾಗಬಹುದು, ಬೋಧನೆಯು ತನ್ನ ಅತ್ಯಂಥ ದೊಡ್ಡ ಪ್ರಭಾವವನ್ನು ಬೀರಬೇಕಾದರೆ ಬಹುಶಃ ಅನೇಕ ವಾರಗಳು ಅಥವಾ ವರ್ಷಗಳ ಕಾಲದ ವರೆಗೆ ಸಹ ತಿಳಿಸಬೇಕಾಗಬಹುದು.

ಯೇಸುವಿನ ಬೋಧನೆಗಳನ್ನು ಆತನ ಅಪೊಸ್ತಲರ ಮೂಲಕವಾಗಿ ಕೇಳಿಸಿಕೊಂಡಿದ್ದ ಪ್ರಥಮ ಶತಮಾನದ ಕ್ರೈಸ್ತರಿಗೆ ಹೀಗೆ ಹೇಳಲ್ಪಟ್ಟಿತು, "ಪ್ರಿಯರೇ, ನೀವಾದರೋ ನಮ್ಮ ಕರ್ತನಾದ ಯೇಸು ಕ್ರಿಸ್ತನ ಅಪೊಸ್ತಲರು ಮೊದಲು ಹೇಳಿದ ಮಾತುಗಳನ್ನು ಜ್ಞಾಪಕಮಾಡಿಕೊಳ್ಳಿರಿ" (ಯೂದನು 17); "ಪರಿಶುದ್ಧ ಪ್ರವಾದಿಗಳು ಪೂರ್ವದಲ್ಲಿ ಹೇಳಿದ ಮಾತುಗಳನ್ನೂ ಕರ್ತನಾದ ರಕ್ಷಕನು ನಿಮ್ಮ ಅಪೊಸ್ತಲರ ಮೂಲಕ ಕೊಟ್ಟ ಅಪ್ಪಣೆಯನ್ನೂ ನೀವು ಜ್ಞಾಪಕಮಾಡಿಕೊಳ್ಳಬೇಕು" (2 ಪೇತ್ರ 3:2).

ಈಗಾಗಲೇ ಉಪದೇಶಗಳನ್ನು ಹೊಂದಿಕೊಂಡಿದ್ದ ಕ್ರೈಸ್ತರಿಗೆ ಮೊದಲು ಕಲಿಸಲ್ಪಟ್ಟದ್ದು ಜ್ಞಾಪಕಪಡಿಸಲ್ಪಟ್ಟಿತು: ". . . ಮೊದಲು ತಿಳಿಸಿದ ಮಾತುಗಳನ್ನ ತಿರಿಗಿ ನಿಮಗೆ ಬರೆಯುವದರಲ್ಲಿ ನನಗೇನೂ ಬೇಸರವಿಲ್ಲ, ನಿಮ್ಮನ್ನಾದರೋ ಅದು ದೃಢ ಮಾಡುವದು" (ಫಿಲಿಪ್ಪಿ 3:1); "ನಾನು . . . ನಿಮ್ಮನ್ನು ಜ್ಞಾಪಕಪಡಿಸಿ ಪ್ರೇರಿಸುವದು ಯುಕ್ತವೆಂದೆಣಿ ಸಿದ್ದೇನೆ" (2 ಪೇತ್ರ 1:13); "ಪ್ರಿಯರೇ, ನಿಮಗೀಗ ಬರೆಯುವದು ಎರಡನೆಯ ಪತ್ರಿಕೆ. . . . ಈ ಎರಡು ಪತ್ರಿಕೆಗಳಲ್ಲಿಯೂ ಜ್ಞಾಪಕಕೊಟ್ಟು ನಿಮ್ಮ ಸರಳ ಮನಸ್ಸನ್ನು ಪ್ರೇರಿಸಿದ್ದೇನೆ" (2 ಪೇತ್ರ 3:1).

ಥೆಸಲೋನಿಕದವರಿಗೆ ಕ್ರಿಸ್ತನ ಎರಡನೆಯ ಬರೋಣದ ಕುರಿತು *ಮತ್ತೊಮ್ಮೆ* ಹೇಳಲ್ಪಡುವ ಅಗತ್ಯವಿತ್ತೋ? ಅವರು ಮನಃಪೂರ್ವಕವಾದ ಕೆಲಸಗಾರರಾಗಿರುವಂತೆ ಅವರನ್ನು *ಮತ್ತೊಮ್ಮೆ* ಪ್ರೋತ್ಸಾಹಿಸುವ ಅಗತ್ಯವಿತ್ತೋ? ಹಿಂಸೆಯ ಮಧ್ಯದಲ್ಲಿ ಸಹಿಸಿಕೊಂಡು ಮುನ್ನಡೆಯುವಂತೆ ಅವರಿಗೆ *ಹೆಚ್ಚಿನ* ಪ್ರೋತ್ಸಾಹವು ಬೇಕಾಗಿತ್ತೋ? ಪ್ರತಿಯೊಂದು ಪರಿಸ್ಥಿತಿಯಲ್ಲಿಯೂ ಉತ್ತರವು ಹೌದು ಎಂದಾಗಿರುತ್ತದೆ, ಮತ್ತು ಆದಕಾರಣ ಈ ಎರಡನೆಯ ಪತ್ರಿಕೆಯು ದೇವರ ಬೋಧನೆಗಳನ್ನು ಪುನರಾವರ್ತಿಸಿತು ಮತ್ತು ವಿವರಿಸಿತು. ಆತನ ಬೋಧನೆಗಳು ಪುನರಾವರ್ತಿಸುವದಕ್ಕೆ ಯೋಗ್ಯವಾದವುಗಳು!

ಮುಂಚೆ ಹೇಳಿದ ಪಾಠಗಳು ಜ್ಞಾಪಕದಲ್ಲಿಟ್ಟುಕೊಳ್ಳಲ್ಪಟ್ಟಿರುತ್ತವೆ ಎಂದು ನಾವು ಊಹಿಸಿಕೊಳ್ಳದಿರೋಣ ಅಥವಾ ಜನರು ನಂಬಿಕೆಯ ಮೂಲಭೂತ ಕಾರ್ಯಗಳನ್ನು

ವಿಶ್ವಾಸಿಸುತ್ತಾರೆ ಬಿಡು ಎಂದು ಲಘುವಾಗಿ ತೆಗೆದುಕೊಳ್ಳಬಾರದು. ನಾವು ಅವರ ಜೀವಿತಕ್ಕಾಗಿ ದೇವರು ಕೊಟ್ಟಿರುವ ಬೋಧನೆಗಳನ್ನು ಮತ್ತೇ ಮತ್ತೇ ಹೇಳುವದಕ್ಕಾಗಿ ಎಂದಿಗೂ ಕ್ಷಮೆಯನ್ನು ಕೋರಬಾರದು!

*ಸಹೋದರರನ್ನು ಪ್ರೋತ್ಸಾಹಿಸುವದರಲ್ಲಿ ವಾತ್ಸಲ್ಯವುಳ್ಳವರಾಗಿರಿ.* ಬೋಧಕರು ದೇವರ ಚಿತ್ತವನ್ನು ಕುರಿತ ಕಲಿಯುವಿಕೆ ಮತ್ತು ಕೈಕೊಂಡು ನಡೆಯುವಿಕೆ ವಿಷಯದಲ್ಲಿ ಬೋಧಕರು ಕೆಲವು ಸಾರಿ ಕಠೋರವಾಗಿ ನಡೆದುಕೊಳ್ಳಬೇಕೆಂಬ ಶೋಧನೆಯನ್ನು ಎದುರ್ಗೊಳ್ಳಬಹುದಾಗಿದೆ. ನಾವು ಕಲಿಸುತ್ತಿರುವ ಜನರು "ಎಂದಿಗೂ ತಿದ್ದಲಾಗದವರು" ಎಂಬದಾಗಿ ನಾವು ಹೇಳಬಹುದಾಗಿದೆ ಅಥವಾ ಆ ಭಾವನೆಯನ್ನು ಮೂಡಿಸಬಹುದಾಗಿದೆ. ಇದು ಅನೇಕ ಸಾರಿ ಅವರು ಮೊಂಡರಾಗಿದ್ದಾರೆ ಎಂಬುದರ ಬದಲಾಗಿ, ಸ್ವತಃ ನಮಗೆ ದೀರ್ಘಶಾಂತಿಯ ಕೊರತೆಯಿದೆ ಎಂಬುದನ್ನು ತೋರಿಸಿ ಕೊಡುವದಾಗಿದೆ.

ನಾವು ಪ್ರತಿಯೊಬ್ಬ ವಿದ್ಯಾರ್ಥಿ ಮತ್ತು ಮಿತ್ರನಲ್ಲಿ ಗರಿಷ್ಠವಾಗಿರುವ ಸಾಮರ್ಥ್ಯವನ್ನು ಕಾಣಬೇಕು ಮತ್ತು ಪ್ರೋತ್ಸಾಹಿಸಬೇಕು. ಒಂದು ಪ್ರಭಾವವನ್ನು ಕಾಣುವದಕ್ಕೆ ವಾರಗಳು, ತಿಂಗಳುಗಳು, ಅಥವಾ ವರ್ಷಗಳು ಸಹ ಬೇಕಾಗಬಹುದು. ಥೆಸಲೋನಿಕದವರಿಗೆ ಬರೆದ ಎರಡನೆಯ ಪತ್ರಿಕೆ, ಮಾತ್ರವಲ್ಲದೆ ಮೊದಲನೆಯ ಪತ್ರಿಕೆಯು ಸಹ ತೋರ್ಪಡಿಸುವದೇನೆಂದರೆ ಬೋಧಕರು ಈ ಕ್ರೈಸ್ತರಲ್ಲಿನ ಸಾಮರ್ಥ್ಯವನ್ನು ಕಾಣಬಲ್ಲವರಾಗಿದ್ದರು ಎಂಬದೆ.

"ನೀವು ಇದನ್ನು ಮಾಡಬಲ್ಲಿರಿ"; "ನೀವು ದೃಢವಾಗಿ ಮುಂದುವರೆಯಬಲ್ಲಿರೆಂದು ನಮಗೆ ಖಚಿತವಾಗಿ ಗೊತ್ತಿದೆ"; ಮತ್ತು "ನೀವು ಯಶಸ್ವಿಯಾಗುವಿರೆಂಬ ಭರವಸೆ ನಮಗಿದೆ" ಎಂಬವುಗಳು 3:4ರಂತಹ ಒಂದು ವಾಕ್ಯಭಾಗದ ಕೆಲವು ವ್ಯಕ್ತಪಡಿಸುವಿಕೆಯ ರೀತಿಗಳಾಗಿವೆ. ನಮ್ಮ ಹಾಗೂ ನಾವು ಯಾರಿಗೆ ಉಪದೇಶಿಸಲು ಪ್ರಯತ್ನಿಸುತ್ತೇವೋ ಅವರ ನಡುವೆ ಒಂದು ಪ್ರೋತ್ಸಾಹಕರವಾದ ಸಂಬಂಧ ಹಾಗೂ ಪ್ರೋತ್ಸಾಹವು ದೇವರು ನಮಗೆ ಏನು ಮಾಡಬೇಕೆಂದು ಬಯಸುತ್ತಾನೆಂಬುದನ್ನು ಅವರಿಗೆ ಕಲಿಸುವದರಲ್ಲಿ ಯಾವಾಗಲೂ ಸಹಾಯಕವಾಗುತ್ತವೆ. ಅವರು ತಮ್ಮ ದೇವರಿಂದ-ಕೊಡಲ್ಪಟ್ಟಿರುವ ಸಾಮರ್ಥ್ಯವನ್ನು ಗುರುತಿಸಿಕೊಂಡು, ದೇವರ ಸಹಾಯದೊಂದಿಗೆ ಅದಕ್ಕೆ ತಕ್ಕಂತೆ ಜೀವಿಸುವದಕ್ಕೆ ಅಪೇಕ್ಷಿಸುವವರಾಗುವ ಹಾಗೆ ನಮ್ಮ ಜೀವಿತಗಳಲ್ಲಿ ಅಂಥ ಪ್ರೋತ್ಸಾಹಕರ ಸಂಭಾಷಣೆಯು ಇರತಕ್ಕದ್ದು.

*ಮುಕ್ತಾಯ.* ನಮಗೆ ಒಬ್ಬ ಅಪೊಸ್ತಲನಿಂದ-ಕ್ರಿಸ್ತನಲ್ಲಿ ಪ್ರೋತ್ಸಾಹವನ್ನು ಮಾಡುವಂತಹ ಒಬ್ಬ ಅಪೊಸ್ತಲನು ಎಂದು ನಮಗೆ ಗೊತ್ತಿರುವವನು-ಪತ್ರಿಕೆಯೊಂದು ಬಂದರೆ, ನಾವು ನಿಶ್ಚಯವಾಗಿಯೂ ಅದನ್ನು ಓದುತ್ತೇವೆ. ನಾವು ಅದನ್ನು ಇಟ್ಟುಕೊಳ್ಳುತ್ತೇವೆ ಮತ್ತು ಅದರಲ್ಲಿ ಕೊಡಲ್ಪಟ್ಟಿರುವ ಸಲಹೆಗಳನ್ನು ಕೈಕೊಂಡು ನಡೆಯುತ್ತೇವೆ.

ಒಂದು ಅರ್ಥದಲ್ಲಿ, ನಮಗೆ ಅಂತಹ ಹಲವಾರು ಪತ್ರಿಕೆಗಳಿರುತ್ತವೆ. ಅವುಗಳೊಳಗೆ ಎರಡು ಪತ್ರಿಕೆಗಳು ಥೆಸಲೋನಿಕದಲ್ಲಿನ ಕ್ರೈಸ್ತರಿಗೆ ಬರೆಯಲ್ಪಟ್ಟವುಗಳಾಗಿವೆ, ಆದರೆ ಅವುಗಳು ನಮಗೂ ಅಷ್ಟೇ ಪ್ರಾಮುಖ್ಯವಾಗಿರುತ್ತವೆ. ನಮ್ಮ ಪರಿಸ್ಥಿತಿಗಳು

ಏನೇ ಆಗಿದ್ದರೂ ಸರಿಯೇ, ನಾವು ಯೇಸುವನ್ನು ಹಿಂಬಾಲಿಸುವದರಲ್ಲಿ ಮುಂದುವರೆಯುವಂತಾಗುವ ಉದ್ದೇಶಕ್ಕಾಗಿ ಅವುಗಳು ಸಂರಕ್ಷಿಸಲ್ಪಟ್ಟಿವೆ. ಅವುಗಳನ್ನು ಅತ್ಯಮೂಲ್ಯವೆಂದೆಣಿಸಿಕೊಳ್ಳೋಣ, ಅವುಗಳನ್ನು ಜ್ಞಾಪಕದಲ್ಲಿಟ್ಟುಕೊಳ್ಳೋಣ, ಮತ್ತು ಅವುಗಳನ್ನು ಅನುಸರಿಸೋಣ. TP

## ಸಿದ್ಧವಾಗಿ ಇರುವಿಕೆ

ಒಬ್ಬ ಯುವಕನಿಗೆ ತೋಟದಲ್ಲಿ ಯಾವದೇ ಕಳೆಗಳು ಬೆಳೆಯದಂತೆ ನೋಡಿಕೊಳ್ಳುವ ಕೆಲಸವನ್ನು ಒಪ್ಪಿಸಲಾಯಿತು. ಆತನು ತನಗೆ ಕೊಡಲ್ಪಟ್ಟಿದ್ದ ಸವಾಲನ್ನು ನೆರವೇರಿಸುವದರಲ್ಲಿ ಬಹಳ ನಂಬಿಗಸ್ತನಾಗಿದ್ದನು. ಆತನೊಂದಿಗೆ ತೋಟವನ್ನು ಓಡಾಡಿ ನೋಡುತ್ತಾ ಇದ್ದ ಒಬ್ಬ ಸ್ನೇಹಿತನು ಆತನಿಗೆ, "ನೀನು ಈ ತೋಟವನ್ನು ಯಜಮಾನ ನಾಳೆಯೇ ಬರುವನೋ ಎಂಬ ರೀತಿಯಲ್ಲಿ ನೋಡಿಕೊಳ್ಳುತ್ತಿರುವಿ" ಎಂದನು. ಆ ಯುವಕನು ತಕ್ಷಣವೇ, "ಓ, ಇಲ್ಲ. ನಾನು ಈ ತೋಟವನ್ನು ಈ *ದಿನವೇ* ನನ್ನ ಯಜಮಾನನು ಬರುವನೇನೋ ಎಂಬಂತೆ ನೋಡಿಕೊಳ್ಳುತ್ತಿದ್ದೇನೆ" ಎಂದು ಉತ್ತರಿಸಿದನು. ಆತನ ಹೇಳಿಕೆಯು ನಾವು ಹೇಗೆ ತೋಟವನ್ನು ನೋಡಿಕೊಳ್ಳುತ್ತೇವೆ ಎಂಬುದಷ್ಟೆ ಅಲ್ಲ, ಆದರೆ ಕರ್ತನ ಬರೋಣವನ್ನು ದೃಷ್ಟಿಯಲ್ಲಿಟ್ಟುಕೊಂಡು ನಾವು ನಮ್ಮನ್ನು ಹೇಗೆ ಇಟ್ಟುಕೊಂಡಿದ್ದೇವೆ ಎಂಬುದನ್ನು ಸಹ ಸೂಚಿಸುತ್ತದೆ. ನಾವು ಈ ಕ್ಷಣವೇ *ಆತನ ಬರೋಣಕ್ಕಾಗಿ ಸಿದ್ಧರಾಗಿದ್ದೇವೋ?*

ಎರಡನೆಯ ಥೆಸಲೋನಿಕದವರಿಗೆ ಬರೆದ ಪತ್ರಿಕೆಯು ಕ್ರಿಸ್ತನ ಎರಡನೆಯ ಬರೋಣವನ್ನು 1 ಥೆಸಲೋನಿಕದವರಿಗೆ ಬರೆದ ಪತ್ರಿಕೆಗಿಂತಲೂ ಬೇರೆಯಾದ ದೃಷ್ಟಿಕೋನದಿಂದ ನೋಡುವದಾಗಿರುತ್ತದೆ. ಪೌಲನ ಈ ಎರಡನೆಯ ಪತ್ರಿಕೆಯು ಕಳ್ಳನಂತೆ ಬರುವ ಎರಡನೆಯ ಬರೋಣ, ಒಂದು ಪ್ರತೀಕಾರ, ಮತ್ತು ಒಂದು ಜ್ಞಾಪಕಪಡಿಸುವಿಕೆ ಇವುಗಳನ್ನು ಚರ್ಚಿಸುತ್ತದೆ. ಮೊದಲ ಅಧ್ಯಾಯವು ಒಂದು ಪ್ರೋತ್ಸಾಹಗೊಳಿಸುವಿಕೆ, ಎರಡನೆಯ ಅಧ್ಯಾಯವು ಒಂದು ವಿವರಣೆ, ಮತ್ತು ಮೂರನೆಯ ಅಧ್ಯಾಯವು ಒಂದು ಪ್ರಬೋಧನೆಯಾಗಿರುತ್ತದೆ.

ಈ ಪತ್ರಿಕೆಯು ಮೊದಲನೆಯ ಪತ್ರಿಕೆಯೊಂದಿಗೆ ಬಹಳಷ್ಟು ಸಾಮ್ಯತೆಯನ್ನು ಹೊಂದಿದೆ. ಥೆಸಲೋನಿಕದವರಿಗೆ ಮೊದಲನೆಯ ಪತ್ರಿಕೆಯ ಚರ್ಚೆಯಾಂಶವು, "ಎರಡನೆಯ ಬರೋಣ" ಆಗಿರುತ್ತದೆ. ಥೆಸಲೋನಿಕದವರಿಗೆ ಬರೆದ ಎರಡನೆಯ ಪತ್ರಿಕೆಯ ಚರ್ಚೆಯಾಂಶವು "ಎರಡನೆಯ ಬರೋಣಕ್ಕಾಗಿ ತಾಳ್ಮೆಯಿಂದ ಕಾಯಿರಿ" ಎಂದಾಗಿರುತ್ತದೆ. ಪೌಲನು ಇಲ್ಲಿ, "ಯೇಸುವು ಬರುತ್ತಿದ್ದಾನೆ, ಆದರೆ ಆತನು ತಕ್ಷಣದಲ್ಲೇ ಬರುತ್ತಿಲ್ಲ. ಆತನು ಬರುವದಕ್ಕೆ ಮುನ್ನ ಏನೋ ಒಂದು ಸಂಭವಿಸಬೇಕು. 'ಅಧರ್ಮಸ್ವರೂಪನು' ಮೊದಲ ಬರಬೇಕಾಗಿರುತ್ತದೆ" ಎಂದು ಹೇಳುತ್ತಾನೆ. ಈ ಪತ್ರಿಕೆಯು ವಿಶಿಷ್ಟವಾಗಿದ್ದು ಇದು "ಪಾಪದ ಮನುಷ್ಯ" ಅಥವಾ "ಅಧರ್ಮಸ್ವರೂಪ"ನ ಕುರಿತು ಒಂದು ವಿವರವಾದ ವರ್ಣನೆಯನ್ನು ಮಾಡುತ್ತದೆ. EC

## ಅಡಿಟಿಪ್ಪಣಿಗಳು

[1]Polycarp *Epistle to the Philippians* 11.3, 4; Ireneaus *Against Heresies* 3.6.5; and Clement of Alexandria *Stromata* 5.3. [2]Robert L. Thomas, "2 Thessalonians," in *The Expositor's Bible Commentary*, ed. Frank E. Gaebelein (Grand Rapids, Mich.: Zondervan, 1978), 11:302. [3]Ibid., 303. [4]Raymond C. Kelcy, *The Letters of Paul to the Thessalonians*, The Living Word Commentary, vol. 13 (Austin, Tex.: R. B. Sweet Co., 1968), 134 ರಿಂದ ಆಯ್ದುಕೊಳ್ಳಲ್ಪಟ್ಟಿದೆ.